

ತುಂಡರಿಸಿದರು, ಮತ್ತ್ಯಾರೋ ಬಾವುಟ ಕಟ್ಟಿದರು, ಇನ್ಯಾರೋ ಭಜನೆಯ ಸಂಗೀತದ ಧಾಟಿಯಲ್ಲಿ ಸಿನಿಮಾದ ಹಾಡನ್ನು ಹಾಡಿ ದೇವರ ಮೇಲಿನ ನಂಬಿಕೆಯನ್ನು ಕೆಡಿಸಿದರು — ಇಂಥ ವಿಚಾರಗಳ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹೇರಳವಾಗಿ ದೊರೆಯುತ್ತವೆ. ನಮಗೆ ಇಂಥವರಿಂದ ಅನ್ಯಾಯವಾಗಿದೆ, ಅದರ ವಿರುದ್ಧ ಸೇಡು ತೀರಿಸಿಕೊಳ್ಳಬೇಕು ಎನ್ನುವ ವಿಚಾರಗಳೇ ತುಂಬಿಕೊಂಡಿರುತ್ತವೆ. ಯುವ ಸಮುದಾಯ ಇಂಥ ವಿಚಾರಗಳಿಗೆ ತುಂಬ ಉದ್ರೇಕಕಾರಿಯಾಗಿ ಪ್ರತಿಕ್ರಿಯೆ ನೀಡುವುದನ್ನು ಕಾಣಬಹುದು.

ಅವಾಚ್ಯ, ಅಶ್ಲೀಲ ಭಾಷೆ ಇಂದು ಕೆಟ್ಟದ್ದು ಅನಿಸುತ್ತಿಲ್ಲ. ತಾಲಿಬಾನಿಗಳಂತೆ ಕೈಕಾಲು ಕತ್ತರಿಸುವ, ಕೊಲ್ಲುವ ಶಿಕ್ಷೆಗಳು ಸಾಮಾಜಿಕ ನ್ಯಾಯವನ್ನು ಬಯಸುವ ಯುವಕರಿಗೆ ಆ ಕ್ಷಣಕ್ಕೆ ಸರಿ ಎನಿಸುತ್ತದೆ. ಹಾಗಾಗಿ ಆರೋಪಿಯನ್ನು ಹೊಡೆಯುವ, ಕೊಲ್ಲುವ ವಿಡಿಯೊಗಳು ನಿರ್ಭಿಡೆಯಿಂದ ಎಲ್ಲ ಕಡೆ ಪ್ರಸಾರ ಆಗುತ್ತವೆ. ಅವುಗಳಿಗೆ ಅಪಾರ ಮೆಚ್ಚುಗೆಯೂ ಸಿಗುತ್ತದೆ. ಅವು ಕ್ಷಣ ಮಾತ್ರದಲ್ಲಿ ಸಾವಿರಾರು ಮಂದಿಯ ನಡುವೆ ಹಂಚಿಕೆ ಆಗುಡುತ್ತವೆ. ಆರೋಪಿ ಬೇರೆ, ಅಪರಾಧಿ ಬೇರೆ. ಅಪರಾಧಿಯನ್ನು ಹಿಡಿಯಲು ಪೊಲೀಸ್ ವ್ಯವಸ್ಥೆ ಇದೆ, ನೊಂದವರಿಗೆ ನ್ಯಾಯ ದೊರಕಿಸಲು ನ್ಯಾಯಾಲಯ ಇದೆ ಎನ್ನುವ ನಂಬಿಕೆಗಳನ್ನೇ ಹುಸಿ ಮಾಡುವ ಪೋಸ್ಟ್‌ಗಳು ಇವು. ದುರಂತ ಎಂದರೆ, ಇಂದು ಸಮಾಜದ ಬಹುಪಾಲು ಮಂದಿ ಇಂಥ ವಿಚಾರಗಳನ್ನೇ ಬೆಂಬಲಿಸುತ್ತಾರೆ! ಕಠಿಣ ಕ್ರಮಕ್ಕೆ ಮುಂದಾಗಬೇಕಾದ ಪೊಲೀಸ್ ಇಲಾಖೆಯೇ ಇಂಥವುಗಳನ್ನು ಕಂಡೂ ಕಾಣದಂತೆ ಸುಮ್ಮನಾಗುತ್ತದೆ ಎಂದರೆ ಇದರ ಕಬಂಧಬಾಹು ಹೇಗಿದೆ ಎಂದು ಕಲ್ಪಿಸಿಕೊಳ್ಳಬಹುದು.

ಉದ್ವೇಗದ, ಉದ್ರೇಕದ ಪೋಸ್ಟ್‌ಗಳು ಯುವ ಜನಾಂಗದ ಮನಸ್ಥಿತಿಯನ್ನು ಒಂದು ರೀತಿಯಲ್ಲಿ ಕೀಳು ಅಭಿರುಚಿಯತ್ತ ತಳ್ಳಿದೆ ಎಂದರೆ ತಪ್ಪಾಗಲಾರದು. ಇಂಥವರಿಗೆ ಅನ್ಯಾಯವಾಗಿದೆ, ನೊಂದವರಿಗೆ ನ್ಯಾಯ ಸಿಗುವಲ್ಲಿಯವರೆಗೆ ಬಿಡಬೇಡಿ, ಸಾಧ್ಯವಾದಷ್ಟು ಜನರಿಗೆ ಹಂಚಿ — ಇಂಥ ಪೋಸ್ಟ್‌ಗಳನ್ನು ಕಂಡರೆ ಸಾಕು ಹಿಂದೆ ಮುಂದೆ ವಿಚಾರಿಸದೆ ಅದನ್ನು ಹಂಚಲಾಗುತ್ತದೆ. ಸತ್ಯಾಸತ್ಯತೆಯನ್ನು ಪರೀಕ್ಷಿಸುವ ಗೋಜಿಗೆ ಹೋಗುವವರು ಕಡಿಮೆ. ವಿಷಯವನ್ನು ಯಾರಾದರೂ ಸಾವಧಾನವಾಗಿ ವಿಶ್ಲೇಷಿಸಿ, ‘ಇದು ಸತ್ಯವಲ್ಲ. ನಿಜವಾದ ವಿಷಯ ಇದು’ ಎಂದು ವಿವರಿಸಿದರೆ ಸಾಕು, ಆ ವ್ಯಕ್ತಿಯನ್ನು ಅತ್ಯಂತ ಕೆಟ್ಟದಾದ ಭಾಷೆಯಲ್ಲಿ ನಿಂದಿಸಲಾಗುತ್ತದೆ. ಅದು ಎಷ್ಟರ ಮಟ್ಟಿಗೆ ಎಂದರೆ, ನನ್ನ ಪರಿಚಯದ ಒಬ್ಬರು ಸಾಮಾಜಿಕ ಕಳಕಳಿಯನ್ನು ಹೊಂದಿದ ಕೋಮು ಸೌಹಾರ್ದದ ಪೋಸ್ಟ್ ಒಂದನ್ನು ಹಾಕಿದ್ದರು. ಒಂದು ಸಂಘಟನೆಯವರ ಸುಳ್ಳು ಪೋಸ್ಟಿಗೆ ವಿರುದ್ಧವಾದ ನಿಜವಾದ ಅಭಿಪ್ರಾಯದ ಪೋಸ್ಟ್ ಅದಾಗಿತ್ತು. ಪರಿಣಾಮವಾಗಿ, ಸಂಘಟನೆಯವರು ಹುಡುಕಿಕೊಂಡು ಬಂದು ಹೆಂಡತಿ–ಮಕ್ಕಳ ಮುಂದೆಯೇ ಜೀವ ಬೆದರಿಕೆ ಹಾಕಿಹೋಗಿದ್ದರು. ಮಾತ್ರವಲ್ಲ, ಅದನ್ನು ವಿಡಿಯೊ ಮಾಡಿ ‘ದೇಶದ್ರೋಹಿಯೊಬ್ಬನಿಗೆ ನಾವು ಸಮಾ ಬುದ್ಧಿ ಕಲಿಸಿದೆವು’ ಎಂದು ಫೇಸ್‌ಬುಕ್‌ನಲ್ಲಿ ಹಂಚಿಕೊಂಡಿದ್ದರು. ಅವರು ಪೊಲೀಸ್ ಸ್ಟೇಷನ್ ಅಲೆದರೂ ಪ್ರಯೋಜನವಾಗಲಿಲ್ಲ. ಅವರ ದನಿಯೇ ಮೆತ್ತಗಾಯಿತು. ಸಾಮಾಜಿಕ ಜಾಲತಾಣಗಳಿಂದ ಅವರು ಸಂಪೂರ್ಣ ವಿಮುಖರಾದರು.

ನಡುವಯಸ್ಸಿನವರು, ಹಿರಿಯ ನಾಗರಿಕರು ಇಂದು ಸಾಮಾಜಿಕ ಜಾಲತಾಣಗಳಲ್ಲಿರುವ ಭೀತಿ ಹುಟ್ಟಿಸುವ ಉದ್ವೇಗದ, ಉದ್ರೇಕಕಾರಿಯಾದ ಪೋಸ್ಟ್‌ಗಳನ್ನು ಕಂಡು ಹೈರಾಣಾಗುತ್ತಿದ್ದಾರೆ. ‘ಕೆಟ್ಟ ವಿಚಾರಗಳನ್ನು ಕಾಣಲು, ಕೇಳಲು ನಮಗೆ ವಾಟ್ಸ್‌ಆ್ಯಪ್, ಫೇಸ್‌ಬುಕ್ ಬೇಕಿತ್ತೇ?’ ಎಂದು ಪ್ರಶ್ನಿಸುತ್ತಿದ್ದಾರೆ. ತಾಂತ್ರಿಕವಾಗಿ ಅವರು ಯುವಕರಂತೆ ಪಳಗಿದವರಲ್ಲ. ಟೈಂ ಪಾಸಿಗಾಗಿ ಅಂಥವುಗಳ ಮೊರೆಹೋದರೆ ಆತಂಕ ಹುಟ್ಟಿಸುವ ವಿಚಾರಗಳೇ ಹೆಚ್ಚು ಕಾಣಸಿಗುತ್ತವೆ. ಅವುಗಳಿಗೆ ಕೊನೆಯಿಲ್ಲವೇ? ಎಂದು ಹಳಹಳಿಸುತ್ತಾರೆ. ಅದು ನಮ್ಮಂಥವರ ಹಳಹಳಿಕೆಯೂ ಹೌದು.

ಪ್ರತಿಕ್ರಿಯಿಸಿ: feedback@sudha.co.in